## 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

### ಸತ್ರ ಮೊಕದ್ದಮೆ ಸಂಖ್ಯೆಃ- 86/2025

### ಪ್ರಾಸಾಃ- 1 ಚಾಸಾಃ- 1

| | | |
|---|---|---|
| ಸಾಕ್ಷಿಯ ಹೆಸರು | : | ಸಂಗೀತಾ |
| ಗಂಡನ ಹೆಸರು | : | ಮಹೇಶ್ |
| ವಯಸ್ಸು | : | 28 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಎತ್ತಿನ ಬೂದಿಹಾಳ್ ಗ್ರಾಮ |

### ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 2.7.2026

### ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ

ಈ ಕೇಸಿನ ಆರೋಪಿ ನನ್ನ ಗಂಡನ ಅಕ್ಕನ ಗಂಡ. ಮೃತ ಮಹೇಶ್ ನನ್ನ ಗಂಡ. ಚಾಸಾ 10 ಮತ್ತು 12 ನನ್ನ ಭಾವಂದಿರು. ಚಾಸಾ 13 ಚಾಸಾ 12 ರವರ ಹೆಂಡತಿ. ಚಾಸಾ 14 ಸಹ ನನ್ನ ಭಾವ. ನನ್ನ ನಾದಿನಿ ಚಾಸಾ 16 ರವರ ಹೆಸರು ಪದ್ಮ. ಆರೋಪಿ ನಮ್ಮ ಊರಿನಲ್ಲೇ ವಾಸವಾಗಿದ್ದಾರೆ. ಅವರ ಮನೆ ನನ್ನ ಮನೆಯ ಎದುರುಗಡೆ ಇದೆ.

ನನ್ನ ಮದುವೆಯಾಗಿ ಇಲ್ಲಿಗೆ 5 ವರ್ಷಗಳಾಗಿದ್ದು ನಮಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ನನ್ನ ಗಂಡನ ಅಕ್ಕ ಪದ್ಮರವರನ್ನು ಆರೋಪಿಗೆ ಕೊಟ್ಟು ಮದುವೆ ಮಾಡಿದ್ದು ಆರೋಪಿ ಆಕೆಯ ಮೇಲೆ ವಿನಾ ಕಾರಣ ಅನುಮಾನ ಪಟ್ಟು ಯವಾಗಲೂ ಜಗಳ ಮಾಡುತ್ತಾ ಹೊಡೆ ಬಡೆ ಮಾಡುತ್ತಿದ್ದರು. ಎಷ್ಟು ಬಾರಿ ಬುದ್ದಿ ಹೇಳಿದರೂ ಸಹ ಆರೋಪಿ ಸುಧಾರಣೆ ಆಗಲಿಲ್ಲ.

ಒಂದು ಬಾರಿ ನಮ್ಮ ಸಂಬಂಧಿಕರ ಮದುವೆಗೆ ನಾನು, ನನ್ನ ಗಂಡ ಮಕ್ಕಳು ಹಾಗೂ ಆರೋಪಿ ಸಹ ತನ್ನ ಹೆಂಡತಿಯ ಜೊತೆ ಹೋಗಿದ್ದೆವು. ಆರೋಪಿಯು ಬೇಗನೇ ಮದುವೆ ಮನೆಯಿಂದ ಹೊರಟು ವಾಪಾಸ್ಸು ಬಂದರು. ನಾವು ಮತ್ತು ಚಾಸಾ 16 ಒಂದು ದಿವಸ ಅಲ್ಲೇ ಉಳಿದುಕೊಂಡೆವು. ದಿಃ 31-7-2025 ರಂದು ನಾವು ವಾಪಾಸ್ಸು ನಮ್ಮ ಊರಿಗೆ ಬಂದೆವು. ಆಗ ಸಮಯ ಸುಮಾರು 3-00 ಗಂಟೆ ಆಗಿತ್ತು. ನಂತರ ಆರೋಪಿಯು ಚಾಸಾ 16 ರವರಿಗೆ ಚೆನ್ನಾಗಿ ಹೊಡೆದು ತಾಳಿ ಕಿತ್ತು ಹಾಕಿದ್ದರು. ಆಗ ನನ್ನ ಗಂಡ ಅವರಿಗೆ ಬುದ್ದಿ ಹೇಳಿ ಪೋಲೀಸರಿಗೆ ದೂರು ಕೊಡುತ್ತೇನೆ ಎಂದು ಹೇಳಿದರು. ಆಗ ಆರೋಪಿಯು ನನ್ನ ಗಂಡನನ್ನು ಕುರಿತು ನೀನು ಪದೇ ಪದೇ ನಿನ್ನ

ಅಕ್ಕನನ್ನು ವಹಿಸಿಕೊಂಡು ಬರುತ್ತೀಯಾ ನಿನ್ನನ್ನು ಸಾಯಿಸುತತ್ತೇನೆ ಆಗ ಯಾರು ದೂರು ಕೊಡುತ್ತಾರೆ ನೋಡೋಣ ಎಂದು ಬೈದರು.

ಮಾರನೇ ದಿನ ಬೆಳಿಗ್ಗೆ ನನ್ನ ಗಂಡ ಆರೋಪಿಯನ್ನು ಕುರಿತು ಅಕಕ್ಕನನ್ನು ಕರೆದುಕೊಂಡು ಪೋಲೀಸ್ ಠಾಣೆಗೆ ಹೋಗುತ್ತೇನೆ ಎಂದು ಹೇಳಿದಾಗ ನೀನು ಹೇಗೆ ಹೋಗುತ್ತೀಯ ಹೋಗು ಸೂಳೆ ಮಗನೇ ನೀನು ಪದೇ ಪದೇ ಅದೇ ಹೇಳುತ್ತೀಯ ಎಂದು ಹೇಳಿದರು. ನಿನ್ನನ್ನು ಸಾಯಿಸಿದರೆ ಯಾರು ಹೋಗಿ ಹೇಳುತ್ತಾರೆ ಎಂದು ಹೇಳಿದರು. ಆ ದಿವಸ ರಾತ್ರಿ 10-40 ಗಂಟೆ ಸಮಯಕ್ಕೆ ನಾವು ಬಾಗಿಲು ಮಂದಕ್ಕೆ ಹಾಕಿ ಪಡಸಾಲೆಯಲ್ಲಿ ಮಲಗಿದ್ದೆವು. ಆಗ ನನ್ನ ಗಂಡ ಜೋರಾಗಿ ಕಿರುಚಿದ್ದು ನನಗೆ ಎಚ್ಚರ ಆಗಿ ನೋಡಲಾಗಿ ಆರೋಪಿ ಕುಡುಗೋಲಿನಿಂದ ನನ್ನ ಗಂಡನಿಗೆ ಹೊಡೆದಿದ್ದ. ನನ್ನ ಗಂಡನ ಎದೆ, ಬಲಗೈ ನಲ್ಲಿ ಗಾಯ ಆಗಿ ರಕ್ತ ಬಂದಿತ್ತು. ನಾನು ರಕ್ತವನ್ನು ನೋಡಿ ಜೋರಾಗಿ ಕಿರುಚಿಕೊಂಡೆ ಆಗ ನನ್ನ ಭಾವ ಹನುಮಂತ ಹಾಗೂ ಗೌರಮ್ಮ ಅಲ್ಲಿಗೆ ಬಂದರು. ಆಗ ಆರೋಪಿ ಕುಡುಗೊಲು ತೆಗೆದುಕೊಂಡು ಅಲ್ಲಿಂದ ಓಡಿ ಹೋದರು. ನಂತರ ಉಳಿದ ಎಲ್ಲರೂ ಅಲ್ಲಿಗೆ ಬಂದರು, ಆ ನಂತರ ಆಟೋದಲ್ಲಿ ನನ್ನ ಗಂಡನನ್ನು ಕೂರಿಸಿಕೊಂಡು ಬಳ್ಳಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಬೆಳಗಿನಜಾವ ವೈದ್ಯರು ಪರೀಕ್ಷೆ ಮಾಡಿ ಈಗಾಗಲೇ ಜೀವ ಹೋಗಿದೆ ಎಂದು ಹೇಳಿದರು. ದಿಃ 2-8-2025 ರಂದು ಬೆಳಿಗ್ಗೆ ಸುಮಾರು 8-00 ಗಂಟೆಗೆ ಪೋಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇನೆ. ನಾನು ಹೇಳಿದ ಪ್ರಕಾರ ಪೋಲೀಸರು ಬರೆದುಕೊಂಡರು. ನನ್ನ ಗಂಡ ಸತ್ತಾಗ ಅವೇಳೆಯಾಗಿದ್ದರಿಂದ ಬೆಳಗಿನ ವೇಳೆ ದೂರು ಕೊಟ್ಟಿದ್ದೇನೆ. ಈಗ ತೋರಿಸುತ್ತಿರುವ ದೂರು ಅದೇ ಆಗಿರುತ್ತದೆ. ಆ ದೂರನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಮದ್ಯಾಹ್ನ 2-00 ಗಂಟೆಗೆ ಪೋಲೀಸರನ್ನು ಕರೆದುಕೊಂಡಯಿ ಹೋಗಿ ಸ್ಥಳ ತೋರಿಸಿದ್ದು ಅಲ್ಲಿ ಪೋಲೀಸರು ವೀಡಿಯೋ ಮತ್ತು ಫೋಟೋ ತೆಗೆದು ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆ ಬರೆದುಕೊಂಡರು. ಅದನ್ನು ಈಗ ಗುರುತಿಸುತ್ತಿದ್ದೇನೆ. ಅದನ್ನು ನಿಪಿ-2 ಎಂದು ಹಾಗೂ ಸಾಕಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈ ತೋರಿಸುತ್ತಿರಮ ಸ್ಥಳ ನಕ್ಷೆಯಲ್ಲಿ ನನ್ನ ಸಹಿವು ಇದೆ. ಅದನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈ ತೋರಿಸುತ್ತಿರುವ 3 ಪೋಟೋಗಳನ್ನು ಅದೇ ಕಾಲಕ್ಕೆ ತೆಗೆಯಲಾಯಿತು. ಅವುಗಳನ್ನು ನಿಪಿ-4 ರಿಂದ 6 ಎಂದು ಗುರುತಿಸಲಾಯಿತು. ಪೋಲೀಸರು ಸದಳದಲ್ಲಿ ಹತ್ತಿರಯ ಮೂಲಕ ರಕ್ತ ತೆಗೆದುಕೊಂಡರು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**